ಕೊಡಗು ಜಿಲ್ಲಾ ಕೃಷಿ ಇಲಾಖೆಗೆ ಬಿಡುಗಡೆಯಾಗಿರುವ ಹಣಕಾಸು ವಿವರ

669(1282) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆ ಕೃಷಿ ಇಲಾಖೆಗೆ ಬಿಡುಗಡೆಯಾಗಿರುವ ಹಣ ಎಷ್ಟು?

ಆ) ಯಾವ ಯಾವ ಯೋಜನೆಗಳಿಗೆ ಈ ಹಣವನ್ನು ಬಳಸಲಾಗಿದೆ; ತಾಲ್ಲೂಕುವಾರು ವಿವರ ಒದಗಿಸುವುದು.

ಇ) ಈ ಜಿಲ್ಲೆಯಲ್ಲಿ ಕೃಷಿ ಹೊಂಡ ನಿರ್ಮಿಸಲು ಉದ್ದೇಶಿಸಿದೆಯೇ; ಹಾಗಿದ್ದರೆ ಎಲ್ಲೆಲ್ಲಿ ಇದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ; ಒಂದು ಕೃಷಿ ಹೊಂಡಕ್ಕೆ ತಗಲುವ ವೆಚ್ಚವೆಷ್ಟು? ಜಿಲ್ಲೆಯಲ್ಲಿ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಲು ಯೋಜಿಸಲಾಗಿದೆ; ಇದರಿಂದ ಆಗುವ ಪ್ರಯೋಜನಗಳೇನು; ತಾಲ್ಲೂಕುವಾರು ವಿವರಗಳೊಂದಿಗೆ ಮಾಹಿತಿ ಒದಗಿಸುವುದು?

ಈ) ಇದರಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡವೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ಕೃಷಿ ಇಲಾಖೆ:-

ಕೊಡಗು ಜಿಲ್ಲೆಯ ಕೃಷಿ ಇಲಾಖೆಗೆ 2001-02ನೇ ಸಾಲಿನಲ್ಲಿ ರೂ. 24,05,300 ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆ:-

ಕೊಡಗು ಜಿಲ್ಲೆಯ ಜಲಾನಯನ ಅಭಿವೃದ್ಧಿ ಇಲಾಖೆಗೆ 2001-02ನೇ ಸಾಲಿನಲ್ಲಿ ರೂ. 82,10,000 ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಆ) ಕೃಷಿ ಇಲಾಖೆ:-

ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆ:-

ಯೋಜನಾವಾರು, ತಾಲ್ಲೂಕುವಾರು ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು ಬಳಸಿರುವ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ (ರೂ.ಲಕ್ಷಗಳಲ್ಲಿ)

ಯೋಜನೆ	ಮಡಿಕೇರಿ	ವೀರಾಜಪೇಟೆ	ಸೋಮವಾರಪೇಟೆ
ಪ.ಘ.ಅ.ಯೋ	20.3	17.2	17.26
ಎಸ್‌ಬಿಆರ್‌ಪೈ	2.4	1.98	1.96
ರಾ.ಜ.ಅ.ಯೋ	6.75	6.24	4.79
ಒಟ್ಟು	29.45	25.42	24.01
ಪ್ರಗತಿ ಮೊತ್ತ :		78.88	

ಉಳಿದ ರೂ. 3.22 ಲಕ್ಷ ಅನುದಾನವನ್ನು ಜಿಲ್ಲಾ ಮಟ್ಟದಲ್ಲಿ ಆಡಳಿತ ಹಾಗೂ ಇತರೆ ಬಾಬ್ತಿಗೆ ವೆಚ್ಚ ಮಾಡಲಾಗಿದೆ.

ಇ) ಜಲಾನಯನ ಅಭಿವೃದ್ಧಿ ಇಲಾಖೆ:-

ಹೌದು. ಈ ಕೆಳಕಂಡಂತೆ ಮೂರು ತಾಲ್ಲೂಕುಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಹಾಗೂ ಈ ಬಗ್ಗೆ ಅಗತ್ಯ ಕ್ರಿಯಾ ಯೋಜನೆಯನ್ನು ಕೊಡಗು ಜಿಲ್ಲಾ ಪಂಚಾಯತ್‌ಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಯೋಜನೆ	ಮಡಿಕೇರಿ	ವೀರಾಜಪೇಟೆ	ಸೋಮವಾರಪೇಟೆ
ಪ.ಘಟ್ಟ.ಅ.	37	31	48
ಎಸ್‌ಬಿಆರ್‌ಪೈ	60	62	26
ಒಟ್ಟು	97	93	74
ಪ್ರಗತಿ ಮೊತ್ತ :	264		

2002-03ನೇ ಸಾಲಿನಲ್ಲಿ ಇನ್ನೂ ಅನುದಾನ ಬಿಡುಗಡೆಯಾಗಿರುವುದಿಲ್ಲ. ಒಂದು ಕೃಷಿ ಹೊಂಡಕ್ಕೆ ಸುಮಾರು ರೂ. 25000 ರಿಂದ ರೂ. 35000 ಬೇಕಾಗುತ್ತದೆ. ಜಿಲ್ಲೆಯಲ್ಲಿ ಮೇಲೆ ವಿವರಿಸಿರುವಂತೆ ಒಟ್ಟು 264 ಕೃಷಿ ಹೊಂಡಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

ಕೃಷಿ ಹೊಂಡದಿಂದ ಆಗುವ ಪ್ರಯೋಜನಗಳು:-

1) ಬೇಸಿಗೆಯಲ್ಲಿ ತರಕಾರಿ ಬೆಳೆಗಳು ಹಾಗೂ ವಾಣಿಜ್ಯ ಬೆಳೆಗಳಾದ ಕಾಫಿ, ಏಲಕ್ಕಿ, ಮೆಣಸು, ಸಸಿಮಡಿಗಳ ನಿರ್ವಹಣೆಗಾಗಿ ನೀರನ್ನು ಬಳಸಲಾಗುವುದು.

2) ಮಂಗಾರಿನಲ್ಲಿ ಮಳೆ ಸಕಾಲದಲ್ಲಿ ಬರದಿದ್ದಾಗ ಕೃಷಿ ಹೊಂಡದಲ್ಲಿ ಶೇಖರಣೆಯಾದ ನೀರನ್ನು ಉಪಯೋಗಿಸಿ ಭತ್ತದ ಸಸಿಮಡಿಗಳ ನಿರ್ವಹಣೆ ಮಾಡಲಾಗುವುದು.

3) ಭತ್ತದ ಬೆಳೆಗೆ ಗರ್ಭಾಂಕುರ ಸಮಯದಲ್ಲಿ ನೀರಿನ ಅಭಾವವಿದ್ದಾಗ ಕೃಷಿ ಹೊಂಡದಲ್ಲಿರುವ ನೀರನ್ನು ಉಪಯೋಗಿಸಿಕೊಂಡು ಬೆಳೆಯನ್ನು ಕಾಪಾಡಿಕೊಳ್ಳಬಹುದಾಗಿದೆ.

4) ಭತ್ತ, ಕಾಫಿ, ಮೆಣಸು ಮುಂತಾದ ಬೆಳೆಗಳಿಗೆ ರಾಸಾಯನಿಕವನ್ನು ಸಿಂಪರಣೆ ಮಾಡುವಾಗ ಕೃಷಿ ಹೊಂಡದ ನೀರನ್ನು ಉಪಯೋಗಿಸಲಾಗುವುದು.

5) ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕಾಫಿ ಬೆಳೆಯ ಹೂ ಬಿಡುವ ಸಮಯದಲ್ಲಿ ಹೊಂಡದಲ್ಲಿ ಶೇಖರಣೆಯಾಗಿರುವ ನೀರಿನಿಂದ ಸ್ಪ್ರಿಂಕ್ಲರ್ ನೀರಾವರಿ ಮಾಡಲಾಗುವುದು.

ಈ) ಪ್ರತಿಯೊಂದು ಯೋಜನೆಗೂ ಜಲಾನಯನ ತತ್ವದ ಆಧಾರದ ಮೇಲೆ ಪ್ರದೇಶಗಳನ್ನು ಗುರುತಿಸಲಾಗುವುದು. ನಂತರ ಆ ಪ್ರದೇಶವನ್ನು ಪ್ರತಿನಿಧಿಸುವ ಜನ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ಜೊತೆ ಹಾಗೂ ಜಲಾನಯನ ಸಮಿತಿ ಜೊತೆ ಚರ್ಚಿಸಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಜಿಲ್ಲಾ ಪಂಚಾಯತಿಯ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅನುಮೋದನೆ ಪಡೆದ ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. ಅನುಷ್ಠಾನಗೊಳಿಸುವ ಮುನ್ನ ಫಲಾನುಭವಿಗಳ ಆರ್.ಟಿ.ಸಿ.ಗಳನ್ನು ಪರಿಶೀಲಿಸಿ, ಅವರ ಒಪ್ಪಿಗೆಯನ್ನು ಪಡೆದು ಕೃಷಿ ಹೊಂಡಗಳನ್ನು ನಿರ್ಮಿಸಲಾಗುವುದು.

ಅನುಬಂಧ-1

2001-2002ನೇ ಸಾಲಿನಲ್ಲಿ ವಿವಿಧ ಯೋಜನೆಯಲ್ಲಿ ಬಿಡುಗಡೆಯಾದ ಅನುದಾನ ಹಾಗು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವಿನಿಯೋಗಿಸಲಾದ ಅನುದಾನದ ವಿವರ

		2001-2002ನೇ ಸಾಲಿನಲ್ಲಿ ಬಿಡುಗಡೆ				2001-02ನೇ ಸಾಲಿನಲ್ಲಿ ಖರ್ಚು				
ಕ್ರ.ಸಂ	ಯೋಜನೆಯ ಹೆಸರು	ಮಡಿಕೇರಿ	ಸೋಮವಾರ ಪೇಟೆ	ವೀರಾಜಪೇಟೆ	ಜಿಲ್ಲೆಗೆ ಬಿಡುಗಡೆಯಾದ ಅನುದಾನ	ಮಡಿಕೇರಿ	ಸೋಮವಾರ ಪೇಟೆ	ವೀರಾಜಪೇಟೆ	ಜಿಲ್ಲೆಯ ಒಟ್ಟು ಖರ್ಚು	ಷರಾ
1	2	3	4	5	6	7	8	9	10	11
A.	**ರಾಜ್ಯವಲಯದ ಯೋಜನೆಗಳು**									
1.	ಸಸ್ಯ ಸಂರಕ್ಷಣಾ ಯೋಜನೆ									
	2401-00-107-0-12	5000	5000	5000	15000	5000	5000	4895	14895	
2.	ಜೈವಿಕ ಗೊಬ್ಬರ ಯೋಜನೆ									
	2401-00-105-0-04	57000	54400	50100	161500	57000	54400	50100	161500	
3.	ಸಮಿತಿಗಳು ಮತ್ತು ಸಲಹೆಗಳು									
	2401-00-800-1-08	6000	1000	1000	8000	5275	1000	1000	7275	
4.	ರೈತ ಸಂಪರ್ಕ ಕೇಂದ್ರ									
	2401-00-109-0-21	172000	238000	238000	648000	152260	213757	163222	529239	
5.	ಕೃಷಿ ವಾರ್ತಾ ಘಟಕ									
	2401-00-109-0-01	18000	10000	10000	38000	17245	10000	10000	37245	
6.	ಕೃಷಿ ವಿಸ್ತರಣಾ ಯೋಜನೆ									
	2401-00-00-1-05	63600	35000	21400	120000	63600	0	0	63600	

1	2	3	4	5	6	7	8	9	10	11
7.	ಪ್ರವಾಸ ಕಾರ್ಯಕ್ರಮ(ಮೆಕ್ಕೆ ಜೋಳ)									
	2401-00-109-0-05	20000	0	0	20000	20000	0	0	20000	
8.	ಕೃಷಿ ಮೇಳ									
	2401-00-109-0-09	0	0	10000	10000	0	0	10000	10000	
9.	ರೈತರಿಗೆ ಉತ್ಪಾದನಾ ಬಹುಮಾನ									
	2401-00-800-1-04	0	0	0	0	0	0	0	0	
10.	ಕೃಷಿ ವಿಸ್ತೃತ ಯೋಜನೆ									
	2401-00-800-1-32									
	ಅ) ಪ್ರಮಾಣಿತ ಬೀಜವಿತರಣೆ	4000	8000	8000	20000	0	7020	2520	9540	
	ಆ) ಬೆಳೆ ಪಾತ್ಯಕ್ಷತೆ	1600	2800	2800	7200	1600	2800	2800	7200	
	ಇ) ಗುಣ ನಿಯಂತ್ರಣ	5000	3000	3000	11000	3395	2976	1935	8305	
	ಈ) ಸಮಗ್ರ ಪೋಶಕಾಂಶ ನಿರ್ವಹಣೆ	51450	51450	53700	156600	34450	31450	53700	119600	
	ಉ) ಸಮಗ್ರ ಪೀಡೆ ನಿರ್ವಹಣೆ	30000	42000	46000	118000	29837	40936	43928	114701	
	ಊ) ಕೃಷಿ ಯಾಂತ್ರೀಕರಣ	78000	184000	153000	415000	42439	173536	133500	349475	
	ರಾಜ್ಯ ವಲಯದ ಒಟ್ಟು	511650	634650	602000	1748300	432101	542875	477600	1452576	

7. ಪ್ರವಾಸ ಕಾರ್ಯಕ್ರಮ				
2401-00-109-0-05	0	0	0	0
8. ಕೃಷಿ ಮೇಳ				
2401-00-109-0-09	20000	0	0	20000
9. ರೈತರಿಗೆ ಉತ್ಪಾದನಾ ಬಹುಮಾನ				
2401-00-800-1-04	18000	33000	33000	84000
10. ಕೃಷಿ ವಿಸ್ತೃತ ಯೋಜನೆ				
2401-00-800-1-32				
ಅ) ಪ್ರಮಾಣಿತ ಬೀಜವಿತರಣೆ	0	10000	10000	20000
ಆ) ಬೆಳೆ ಪಾತ್ಯಕ್ಷತೆ	12500	12500	12500	37500
ಇ) ಗುಣ ನಿಯಂತ್ರಣ	2600	2600	2800	8000
ಈ) ಸಮಗ್ರ ಪೋಶಕಾಂಶ	68000	71000	68000	207000
ಉ) ಸಮಗ್ರ ಪೀಡೆ ನಿರ್ವಹಣೆ	55500	56500	56000	168000
ಊ) ಕೃಷಿ ಯಾಂತ್ರೀಕರಣ	246666	226666	226668	700000
ರಾಜ್ಯ ವಲಯದ ಒಟ್ಟು	620394	634758	630548	1885700
ಜಿಲ್ಲಾ ವಲಯದ ಕಾರ್ಯಕ್ರಮಗಳು				
1. ಕಛೇರಿ ಕಟ್ಟಡಗಳು	0	89000	64000	153000
2401-00-800-1-04				
ತಾಲ್ಲೂಕು ಪಂಚಾಯತಿ ಯೋಜನೆಗಳು				
1. ಹಸಿರೆಲೆ ಗೊಬ್ಬರ ಯೋಜನೆ	15000	21000	21000	57000
2401-00-105-0-66				
2. ಸಸ್ಯಸಂರಕ್ಷಣೆ	55000	68000	68000	191000
2401-00-107-0-51				
3. ಕೃಷಿ ಜಾತ್ರೆ				
2401-00-109-0-71	3000	10000	6000	19000
4. ವಿಶೇಷ ಘಟಕ ಯೋಜನೆ				
2225-01-800-0-04	30000	56000	56000	142000
5. ಗಿರಿಜನ ಉಪ ಯೋಜನೆ				
2225-02-796-1-07	15000	32000	60000	107000
ತಾಲ್ಲೂಕು ಪಂಚಾಯತ್ ಒಟ್ಟು	118000	187000	211000	516000
ಒಟ್ಟು	738394	910758	905548	2554700